ಮರಳಿ ಬರುವೆ' ಎಂದು ಹೇಳಿ ಕೋಣೆಯಿಂದ ಹೊರಬರಲು ತಯಾರಾದರು ಡಾಕ್ಟರ್ ಜಾಧವ.

'ಡಾಕ್ಟರ್, ನನಗೂ ಇಂಗ್ಲಿಷಿನಲ್ಲಿ ಮಾತನಾಡಲು ಬರುತ್ತದೆ. ಬೆಳಿಗ್ಗಿನಿಂದ ಸಾಯಂಕಾಲದವರೆಗೂ ಬರುತ್ತಿದ್ದ ಗ್ರಾಹಕರ ಜೊತೆಗೆ ಮಾತನಾಡುವುದೇ ನನ್ನ ಕರ್ತವ್ಯವಾಗಿತ್ತು' ಎಂದು ಮರಿಯಾ ಒಮ್ಮೆಲೇ ತುಟಿ ಬಿಚ್ಚಿ ಬಡಬಡನೆ ಮಾತನಾಡತೊಡಗಿದಳು.

'ಕಾಣಬಾರದ್ದನ್ನೆಲ್ಲ ಕಂಡು, ನಡೆಯಬಾರದ್ದೆ ನಡೆದು ಹೋದಾಗ, ಯಾಕೋ ಮೌನವೇ ಹಿತವೆನಿಸಿ, ಮಾತುಗಳು ಕಡಿಮೆಯಾಗತೊಡಗಿವೆ, ಬೇಕಾದಾಗ ಮಾತ್ರ ಮನಬಿಚ್ಚಿ ಮಾತನಾಡುತ್ತೇನೆ' ಎಂತಂದು ಕಿಟಕಿಯ ಹೊರಗೆ ಅನತಿ ದೂರದಲ್ಲಿ ಕಾಣುತ್ತಿದ್ದ 'ಸಿಲ್ವರ್ ಬರ್ನ್' ಶಾಪಿಂಗ್ ಮಳಿಗೆಯತ್ತ ನೋಡತೊಡಗಿದಳು.

'ಖಾರ್ಕಿವ್ ಪಟ್ಟಣದ ಅಂಥದೇ ಮಳಿಗೆಯೊಂದರಲ್ಲಿ ನನ್ನದೂ ಒಂದು ಡಿಸ್ಪೆನರಿ ಅಂಗಡಿ ಇತ್ತು. ಮಳಿಗೆಯಲ್ಲಿ ದಿನವಿಡೀ ಗ್ರಾಹಕರೇ ಗ್ರಾಹಕರು, ಮಾತೇ ಮಾತು, ಉಲ್ಲಾಸವೇ ಉಲ್ಲಾಸ'– ಮಾತು ಮುಗಿಸಿ ಒಂದು ಕ್ಷಣ ಮೌನವಾದಳು. ಅವಳ ಕಣ್ಣುಗಳು ತೇವಗೊಂಡಿದ್ದವು.

'ಅದೊಂದು ದಿನ ಯುದ್ಧವೆಂಬ ಪಿಶಾಚಿಯ ಒಡಲಿನಿಂದ ಚಿಮ್ಮಿದ ಬಾಂಬ್ ದಾಳಿಯಲ್ಲಿ, ಮಳಿಗೆಯ ಜೊತೆಗೆ ನನ್ನ ಅಂಗಡಿ ಮತ್ತು ಅದರಷ್ಟೇ ವಿಶಾಲವಾಗಿದ್ದ ನನ್ನ ಕನಸುಗಳು ಸುಟ್ಟು ಭಸ್ಮವಾದವು. ಸದಾ ಉಲ್ಲಾಸದಿಂದ ತುಂಬಿರುತ್ತಿದ್ದ ಜಾಗ ಒಂದೇ ಕ್ಷಣದಲ್ಲಿ ರೋದನದ ಒಡಲಾಗಿ, ಹೆಣಗಳ ಬೀಡಾಗಿ ಬಿಟ್ಟಿತ್ತು'—ಅವಳ ಮಾತುಗಳನ್ನು ಕೇಳುತ್ತ ಅವರೆಲ್ಲ ಮೌನರಾಗಿಬಿಟ್ಟಿದ್ದರು.

ಇನ್ನೂ ವಾರ್ಡಿನಲ್ಲಿ ಎಷ್ಟೋ ರೋಗಿಗಳನ್ನು ನೋಡುವುದು ಬಾಕಿ ಇದ್ದರೂ, ಜಾಧವರಿಗೆ ಅವಳ ಮಾತುಗಳನ್ನು ಇನ್ನಷ್ಟು ಕೇಳಬೇಕೆನಿಸಿತು.

'ಸಾರಿ ಸಿಸ್ಟರ್... ನನಗೆ ಏನಾಗಿದೆಯೆಂದು ಹೇಳುವುದನ್ನು ಬಿಟ್ಟು ಬೇರೆ ಕಥೆಯನ್ನೇ ಹೇಳಿಬಿಟ್ಟೆ'.

'ಮರಿಯಾ, ಸಾರಿ ಏಕೆ? ನಾವೆಲ್ಲ ಇಲ್ಲಿ ಇರುವುದು ನಿನ್ನಂತಹ ರೋಗಿಗಳ ಮಾತುಗಳನ್ನು ಕೇಳಿ ಸಹಾಯ ಮಾಡುವುದಕ್ಕೆ ತಾನೆ?' ಎಂದು ಸಿಸ್ಟರ್ ಲೂಸಿ ಡಾಕ್ಟರ್‌ರತ್ತ ನೋಡಿದಳು.

'ಆ ದಿನ ಯುದ್ಧ ಎಂಬ ಹೆಸರಿನಲ್ಲಿ ಏನೆಲ್ಲಾ ನಡೆದು ಹೋಯಿತು. ಸೈನಿಕರೆಂಬುವ ಮನುಷ್ಯರು ಮೃಗಗಳಿಗಿಂತಲೂ ಕೀಳಾಗಿದ್ದರು, ಕಾಮಪಿಶಾಚಿಗಳಾಗಿದ್ದರು. ಅಮಾಯಕರನ್ನು ಸಾಯಿಸಿ ಬೀದಿಯಲ್ಲಿ ರಕ್ತದ ಓಕುಳಿಯನ್ನೇ ಹರಿಸಿದರು. ಪ್ರಾಣಭಯದಿಂದ ಓಡುತಲಿದ್ದ ಹೆಂಗಸರ ಮೇಲೆ ವಯಸ್ಸಿನ ಅಂತರವಿಲ್ಲದೆ ಅತ್ಯಾಚಾರವನ್ನು ಎಸಗಿದರು. ಕ್ರೂರಿಗಳು... ಅಂತಃಕರಣವಿಲ್ಲದ ಪಿಶಾಚಿಗಳು...' ಅವಳ ಧ್ವನಿ ಗದ್ಗದಿತವಾಗಿತ್ತು, ಬಿಸಿ ಕಣ್ಣೀರು ಬಾಡಿದ ಕೆನ್ನೆಗಳ ಮೇಲೆ ಸರಸರನೆ ಇಳಿಯತೊಡಗಿತ್ತು. ಸಿಸ್ಟರ್ ಲೂಸಿ ಅವಳ ಬೆನ್ನಿನ ಮೇಲೆ ಕೈಯಿಟ್ಟು ಸಮಾಧಾನಪಡಿಸಲು ಪ್ರಯತ್ನಿಸುತ್ತಿದ್ದಳು. ಮರಿಯಾ ಅಳುತ್ತಲೇ ಮಾತು ಮುಂದುವರೆಸಿದ್ದಳು.

'ಆ ಕರಾಳ ದಿನದ ಪೈಶಾಚಿಕ ಘಟನೆಯಲ್ಲಿ ಬಲಿಪಶುಗಳಾದ ಎಷ್ಟೋ ಹೆಂಗಳೆಯರ ಪ್ರತೀಕ ನಾನು. ಹೌದು... ಆರು ತಿಂಗಳಗಳ ಹಿಂದೆ ನನ್ನ ಮೇಲೆ ಅತ್ಯಾಚಾರವಾಯಿತು... ಆ ಪಾಪಿ ಸೈನಿಕನಿಂದ.... ಮೂರ್ನಾಲ್ಕು ದಿನಗಳಿಂದ ವಾಂತಿ ಜಾಸ್ತಿಯಾಗಿದೆ...' ಎಂದು ಮಾತು ಮುಗಿಸಿ ನಿಟ್ಟುಸಿರುಬಿಟ್ಟಳು ಮರಿಯಾ. ಅವಳ ದಾರುಣ ಕಥೆಯನ್ನು ಕೇಳಿ, ಒಂದು ಕ್ಷಣ ಡಾಕ್ಟರನಿಗೆ ಏನು ಹೇಳಬೇಕೆಂದು ತೋಚಲಿಲ್ಲ. ಹೇಗೋ ಸಾವರಿಸಿಕೊಂಡು ಮಾತು ಮುಂದುವರೆಸಿದ.

'ಮರಿಯಾ! ನಿನಗಾದ ಅನ್ಯಾಯವನ್ನು ಕೇಳಲು ನಮಗೆಲ್ಲ ದುಃಖವಾಗುತ್ತಿದೆ. ನಿನಗೆ ಅಭ್ಯಂತರವಿಲ್ಲದಿದ್ದರೆ, ನಿನ್ನನ್ನು ಪರೀಕ್ಷೆ ಮಾಡಬಹುದೆ?'

ಮೌನದಲ್ಲಿಯೇ ಸಮ್ಮತಿ ಸೂಚಿಸಿ ಹಾಸಿಗೆಯ ಮೇಲೆ ಮಲಗಿಕೊಂಡಳು. ಹೊಕ್ಕಳದವರೆಗೂ ಉಬ್ಬಿದ ಆಕೆಯ ಉದರವನ್ನು ನೋಡಿ 'ಕನಿಷ್ಠ ಆರು ತಿಂಗಳು ಆಗಿರಬಹುದು' ಎಂದು ಡಾಕ್ಟರ್ ಊಹಿಸಿದರು. ತಪಾಸಣೆಗೆಂದು ಹೊಟ್ಟೆಯನ್ನು ಮುಟ್ಟಿದ ಕ್ಷಣವೇ ಅವಳ ಶರೀರವು ಬಿಲ್ಲಿನಂತೆ ಬಾಗಿ, ಚಾಚಿದ ಕಾಲುಗಳು ಹಾಗೆಯೇ ಮುದುರಿಕೊಂಡವು. ಅವಳ ಕಣ್ಣುಗಳಲ್ಲಿ ಭಯ ಚಿಮ್ಮಿದಂತಿತ್ತು. 'ಬೇಡ...' ಎಂಬ ಉದ್ಗಾರದೊಂದಿಗೆ ಹೊಟ್ಟೆಯ ಮೇಲಿದ್ದ ಅವನ ಕೈಯನ್ನು ಕಿತ್ತೆಸೆದು ಏದುಸಿರುಬಿಡತೊಡಗಿದಳು. ಸ್ವಲ್ಪ ಸಾವರಿಸಿಕೊಂಡು ನಡುಗುವ ಧ್ವನಿಯಲ್ಲಿ ಮಾತು ಮುಂದುವರೆಸಿದಳು.

'ಡಾಕ್ಟರ್, ನನ್ನ ವರ್ತನೆಯನ್ನು ಕ್ಷಮಿಸಿ ಬಿಡಿ. ಆ ಹೀನಾಯವಾದ ಘಟನೆ ನಡೆದಾಗಿನಿಂದಲೂ, ಯಾರಾದರು ಅಪರಿಚಿತ ಗಂಡಸಿನ ಸ್ಪರ್ಶವಾದರೆ, ನನಗರಿಯದಂತೆ ನನ್ನ ದೇಹವು ಹೀಗೆ ವರ್ತಿಸಿಬಿಡುತ್ತದೆ. ಆದ ಆಘಾತಕ್ಕೆ ನಲುಗಿದ ಮನಸು, ಕೆಟ್ಟವರಾರೋ ಒಳ್ಳೆಯವರಾರೋ ಎಂದು ನಿರ್ಧರಿಸುವ ಶಕ್ತಿಯನ್ನು ಕಳೆದುಕೊಂಡಿದೆ. ನೀವು ನನಗೆ ಸಹಾಯವನ್ನು ಮಾಡಲು ಪ್ರಯತ್ನಿಸುತ್ತಿದ್ದೀರಿ ಅಂತಾ ನನಗೆ ಗೊತ್ತು. ಆದರೆ, ನನಗೆ ಈ ತಪಾಸಣೆಯನ್ನು ತಡೆದುಕೊಳ್ಳಲು ಸಾಧ್ಯವಿಲ್ಲ'.

ಡಾಕ್ಟರ್ ಜಾಧವ ತನ್ನ ವೃತ್ತಿಜೀವನದಲ್ಲಿ, ಅತ್ಯಾಚಾರ ಮತ್ತು ಲೈಂಗಿಕ ಕಿರುಕುಳಕ್ಕೆ ಒಳಗಾದ ಸುಮಾರು ಹೆಂಗಳೆಯರನ್ನು ಕಂಡಿದ್ದರು. ಅಂಥ ಘಟನೆಗಳು ಅವರ ಒಳ ಮನಸಿನಲ್ಲಿ ಎಂಥ ಆರದ ಬರೆಯನ್ನು ಎಳೆಯುತ್ತವೆ ಎಂಬ ಅರಿವು ಅವನಿಗೆ ಚೆನ್ನಾಗಿತ್ತು. ಅವಳಿಂದ ಆ ಪ್ರತಿಕ್ರಿಯೆಯನ್ನು ನಿರೀಕ್ಷಿಸಿದ್ದ ಅವನು ಒಂದೆರಡು ನಿಮಿಷ ಹಾಗೆಯೇ ಏನನ್ನೂ ಉತ್ತರಿಸದೆ ಮೌನವಾಗಿದ್ದರು. ಸಿಸ್ಟರ್ ಲೂಸಿ ಅವಳನ್ನು ಸಮಾಧಾನ ಪಡಿಸುವ ಕಾರ್ಯದಲ್ಲಿ ನಿರತಳಾಗಿದ್ದಳು. ಮೌನವನ್ನು ಮುರಿದು ಡಾಕ್ಟರ್ ಮಾತು ಮುಂದುವರೆಸಿದರು.

'ಮರಿಯಾ, ನಮಗೆಲ್ಲ ನಿನ್ನ ಪರಿಸ್ಥಿತಿಯ ಸಂಪೂರ್ಣ ಅರಿವಾಗಿದೆ. ಆದರೆ ಈ ಸಂದರ್ಭದಲ್ಲಿ ನಾನು ನಿನಗೆ ಸತ್ಯ ಹೇಳಲೇಬೇಕಾಗಿದೆ. ವೈದ್ಯನಾಗಿ ಅದು ನನ್ನ ಕರ್ತವ್ಯ'. ಅವನೇನು ಹೇಳಬಹುದೆಂದು ಅವಳು ಅವರನ್ನೇ ನೋಡತೊಡಗಿದಳು.

'ಹೇಳಲು ವಿಷಾದವಾಗುತ್ತದೆ, ನೀನು ಗರ್ಭವತಿ ಆಗಿರುವೆ. ಎಷ್ಟು ತಿಂಗಳು ಎಂದು ನಿರ್ಧರಿಸಲು ಅಲ್ಟ್ರಾಸೌಂಡ್ ಪರೀಕ್ಷೆಯ ಅವಶ್ಯಕತೆ ಇದೆ. ಈಗಲೇ ಆ ಪರೀಕ್ಷೆಯ ವ್ಯವಸ್ಥೆಯನ್ನು ಮಾಡುತ್ತೇನೆ' ಎಂದು ಹೇಳಿ ಮಾತು ಮುಗಿಸಿದರು.

'ಹಾಗಾದರೆ ಇದು ಆ ಕ್ರೂರಿಯ ಪಾಪದ ಪಿಂಡ. ಇದನ್ನು ನನ್ನ ಹೊಟ್ಟೆಯಲ್ಲಿ ಬೆಳೆಯಲು ಬಿಡಲಾರೆ. ದಯವಿಟ್ಟು ಇದನ್ನು ನನ್ನ ಗರ್ಭಾಶಯದಿಂದ ಕಿತ್ತು ಬಿಸಾಕಿ. ಪ್ಲೀಸ್ ಡಾಕ್ಟರ್, ಪ್ಲೀಸ್...' ಎಂದು ಗೋಗರೆಯತೊಡಗಿದಳು.

'ಮೊದಲು ಅಲ್ಟ್ರಾಸೌಂಡ್ ಪರೀಕ್ಷೆಯಾಗಲಿ, ಆಮೇಲೆ ನಾನು ನಿನ್ನ ಜೊತೆಗೆ ಮಾತನಾಡುತ್ತೇನೆ. ನಾವೆಲ್ಲ ಇರುವುದು ನಿನಗೆ ಸಹಾಯ ಮಾಡಲಿಕ್ಕೆಂದೇ. ನಮ್ಮಿಂದ ಎಷ್ಟು ಸಾಧ್ಯವೋ, ಅಷ್ಟೊಂದೂ ಸಹಾಯವು ನಿನಗೆ ಇದೆ ಎಂಬ ಮಾತು ನೆನಪಿರಲಿ' ಎಂದು ಕೋಣೆಯಿಂದ ಹೊರಬಂದರು.

'ಮರಿಯಾ, ಯು ಆರ್ ಇನ್ ಎ ಸೇಫ್ ಹ್ಯಾಂಡ್ಸ್' ಎಂದು ಹೇಳಿ ಲೂಸಿಯೂ ಡಾಕ್ಟರರ ಜೊತೆಗೂಡಿದರು. ಸೋನೋಗ್ರಾಫರ್ ಮೇರಿ ಮರಿಯಾಳ ಹೊಟ್ಟೆಯ ಮೇಲೆ ಅಲ್ಟ್ರಾಸೌಂಡ್ ಯಂತ್ರದ ಪ್ರೋಬನ್ನು ಓಡಾಡಿಸಿ ಪರೀಕ್ಷೆ ನಡೆಸಿದ್ದಳು. ಯಂತ್ರದ ಪರದೆಯ ಮೇಲೆ ಗರ್ಭದಲ್ಲಿದ್ದ ಮಗುವಿನ ಒಂದೊಂದು ಅಂಗಗಳು ಮೂಡಿಬರತೊಡಗಿದ್ದವು. ನೋಡಬಾರದೆಂದರೂ, ಮರಿಯಾಳ ಕಣ್ಣುಗಳು ಪರದೆಯತ್ತ ವಾಲತೊಡಗಿದ್ದವು. ಪರದೆಯ ಮೇಲೆ ಮೂಡಿದ್ದ ಮಗುವಿನ ಮುಖ ಆ ಕ್ರೂರಿಯ ತದ್ರೂಪವಾಗಿ ಗಹಗಹಿಸಿ ನಗುತ್ತ 'ನಿನ್ನನ್ನು ಬಿಡಲಾರೆ' ಎಂದು ಗರ್ಜಿಸುತ್ತಿರುವಂತೆ, ಅದರ ಚಾಚಿದ ಕೈಗಳು ಚೂರಿಯನ್ನು ಹಿಡಿದು ಚುಚ್ಚಲು ಸಮೀಪಿಸುತ್ತಿರುವಂತೆ, ಓಡಾಡುತ್ತಿದ್ದ ಕಾಲುಗಳು ತನ್ನನ್ನು ತುಳಿಯಲು ತವಕಿಸುತ್ತಿರುವಂತೆ ಭಾಸವಾಗಿ, ತಕ್ಷಣವೇ ಗಟ್ಟಿಯಾಗಿ ಕಣ್ಣುಗಳನ್ನು ಮುಚ್ಚಿಕೊಂಡಳು.



'ಮರಿಯಾ, ಎಲ್ಲ ಸರಿಯಾಗಿದೆ. ಇಪ್ಪತ್ತಾರು ವಾರ ತುಂಬಿದೆ. ನೀನು ವಾರ್ಡಿಗೆ ಹೋಗಬಹುದು. ಪರೀಕ್ಷೆಯ ಫಲಿತಾಂಶವನ್ನು ಡಾಕ್ಟರ್ ವಿವರಿಸುತ್ತಾರೆ' ಎಂದು ಹೇಳಿ ಮೇರಿ ಅವಳನ್ನು ವಾರ್ಡಿಗೆ ಮರುಕಳಿಸಿದಳು. ಕೋಣೆಗೆ ಮರಳಿದ ಮರಿಯಾ ಡಾಕ್ಟರರ ಆಗಮನಕ್ಕಾಗಿ ಕಾತರದಿಂದ ಕಾಯುತ್ತಲಿದ್ದಳು. ಅಲ್ಟ್ರಾಸೌಂಡ್ ಪರೀಕ್ಷೆಯ ವರದಿಯನ್ನು ನೋಡಿದ ಡಾಕ್ಟರ್, 'ಈ ಕೇಸು ತನ್ನ ವೃತ್ತಿಯ ಸತ್ವಪರೀಕ್ಷೆ' ಎಂದು ಮನಸ್ಸಿನಲ್ಲಿಯೇ ಗೊಣಗುಟ್ಟುತ್ತ, ಸಿಸ್ಟರ್ ಲೂಸಿಯೊಂದಿಗೆ ಅವಳ ಕೋಣೆಗೆ ಕಾಲಿಟ್ಟರು. ಇವರ ಬರುವಿಕೆಗಾಗಿಯೇ ಹಾತೊರೆಯುತ್ತಿದ್ದ ಮರಿಯಾ ಅಂದಳು.

'ಡಾಕ್ಟರ್, ಈ ಮಗುವನ್ನು ನನ್ನ ಹೊಟ್ಟೆಯಲ್ಲಿಟ್ಟುಕೊಂಡು ಬದುಕುವ ಶಕ್ತಿ ನನಗೆ ಇಲ್ಲವೆಂದೆನಿಸುತ್ತಿದೆ. ಶಾರೀರಿಕವಾಗಿ ಮತ್ತು ಮಾನಸಿಕವಾಗಿ ನಾನು ಸೋತುಹೋಗಿದ್ದೇನೆ. ನಿಮ್ಮಲ್ಲಿ ನನ್ನ ಕಳಕಳಿಯ ವಿನಂತಿ, ದಯವಿಟ್ಟು ಈ ಪಿಂಡವನ್ನು ಕಿತ್ತೆಸೆದು ನನ್ನ ಗರ್ಭಾಶಯವನ್ನು ಪರಿಶುದ್ಧವನ್ನಾಗಿಸಿಬಿಡಿ'.